"ಯಾರಾತ? ಅವನ್ಯಾಕೆ ಅಲ್ಲಿ ಬಂದಿದ್ದ?"

"ಆತನೊಡನೆ ಮಿಥಿಲಾಗೆ ಅಕ್ರಮ ಸಂಬಂಧವಿತ್ತು! ಮೂಲ ಯೋಜನೆಯಂತೆ, ಅವರಿಬ್ಬರೂ ಆ ಸಂಜೆ ಎಲ್ಲಿಗೋ ಪಿಕ್ನಿಕ್ಕಿಗೆ ಹೋಗುವವರಿದ್ದರು. ಸಾಬುವಿನ ಸಹೋದ್ಯೋಗಿಯ ಹೇಳಿಕೆಯಂತೆ, ಆತ ಹಠಾತ್ ಪ್ಲಾನು ಬದಲಾಯಿಸಿ, ಕಚೇರಿಗೆ ಹಿಂದಿರುಗಿದನಂತೆ. ಮಿಥಿಲಾಳ ಸಾವು ಸಂಭವಿಸುವ ಹೊತ್ತಿನಲ್ಲಿ ಆತ ಅಲ್ಲೇ ಇದ್ದಿರಬೇಕು. ಆತ ಅಲ್ಲೇನು ಮಾಡಿದ? ಆ ಬಗ್ಗೆ ಒಂದಿಷ್ಟು ತನಿಖೆ ಬಾಕಿಯಿದೆ."

"ಅಂದರೆ, ಸಾಬುವೇ ಮಿಥಿಲಾಳನ್ನು ಕೊಂದಿದ್ದಾನೆಯೇ? ಕೊಲೆಗೆ ಕಾರಣವೇನು?"

"ತನಿಖೆಯಿಂದ ಗೊತ್ತಾಗಬೇಕಷ್ಟೆ. ನಮಗೆ ಎರಡು ದಿನ ಕಾಲಾವಕಾಶ ನೀಡಿ."

"ಅವಸರವಿಲ್ಲ. ನಾನು ಪ್ರಕರಣದ ವಿಚಾರಣೆ ಮುಂದೂಡಿದ್ದೇನೆ."

ಹಾಗೆಂದು ಹೇಳಿ, ಕಾಶಿ ತೆರಳಿದರು.

★★★

ಎರಡು ದಿನಗಳ ಅನಂತರ ಮಧ್ಯಾಹ್ನ ಈರಪ್ಪ ಬಂದ. ಆತನಿಗೆ ಬರಲು ಕರಮಚಂದ ಹೇಳಿದ್ದನಂತೆ.

"ಮಿಥಿಲಾ ಸತ್ತ ದಿನ, ಚೆಟ್ಟಿಯಪ್ಪ ಎಷ್ಟು ಹೊತ್ತಿಗೆ ಕರೆ ಮಾಡಿದರು?" ಕರಮಚಂದನ ಪ್ರಶ್ನೆ.

"ಮೂರು ಗಂಟೆಯ ಹೊತ್ತಿಗೆ ಇರಬೇಕು."

"ಪೊಲೀಸ್ ದಾಖಲೆಗಳ ಪ್ರಕಾರ, ಚೆಟ್ಟಿಯಪ್ಪ ನಿನ್ಗೆ ಎರಡೂ ಹತ್ತಕ್ಕೆ ಕರೆ ಮಾಡಿದ್ದಾರೆ. ಅದಕ್ಕೂ ಮೊದಲು ಹನ್ನೆರಡಕ್ಕೆ."

ಅದನ್ನು ಕೇಳಿದಾಗ, ಆತನ ಮೊಗ ಬಿಳಿಚಿಕೊಂಡಿತು.

"ನಿನ್ಗೆ ಸಾಬು ವರ್ಗೀಸ್‌ನ ಪರಿಚಯವಿದೆಯೇ?"

ಆತ ಇಲ್ಲವೆಂದ.

"ನಿನ್ನ ಮೊಬೈಲಿನಿಂದ ಆತನಿಗೆ ಮಿಥಿಲಾ ಸತ್ತ ಎರಡನೇ ದಿನ ಕರೆ ಹೋಗಿದೆ. ಯಾಕೆ? ನಿನ್ನ ಫೋನಿನ ಸಿಡಿಆರ್ ನನ್ನಲ್ಲಿದೆ."

ಆತ ಇನ್ನಷ್ಟು ಬಿಳಿಚಿಕೊಂಡ.

"ಆಮೇಲೆ ಹಲವು ಬಾರಿ ನೀನು ಆತನಿಗೆ ಕರೆ ಮಾಡಿದ್ದೇಕೆ?"

"ಸರ್, ಹಣಕ್ಕಾಗಿ ಆತನಿಗೆ ಕರೆ ಮಾಡಿದ್ದೆ."

"ಹಣಕ್ಕೆ? ಅವ್ನೇಕೆ ನಿನ್ಗೆ ಹಣ ಕೊಡ್ತಾನೆ?"

"ಪೊಲೀಸರಲ್ಲಿ ನಾನು ಬಾಯಿ ಬಿಡಬಾರದು ಅಂತ!"

"ಏನನ್ನು?"

"ಮಿಥಿಲಾಳ ಕೊಲೆ ಮಾಡಿದ್ದನ್ನು!"

"ನಿನ್ನಲ್ಲೇನು ಸಾಕ್ಷ್ಯವಿತ್ತು?"

"ಇಟ್ಟಿಗೆ! ಆತನ ಬೆರಳಚ್ಚು ಇರುವ ಇಟ್ಟಿಗೆ. ನಾನೆಲ್ಲಾ ಹೇಳ್ತೀನಿ. ಮೇಡಂಗೆ ಯಾರದ್ದೋ ಜೊತೆ ಸಂಬಂಧವಿದೆಯಂತ ಚೆಟ್ಟಿಯಪ್ಪರಿಗೆ ಕೆಲವು ಸಮಯದಿಂದ ಅನುಮಾನವಿತ್ತು. ಕೊಲೆಯಾಗುವ ದಿನ, ಹತ್ತು ಗಂಟೆಗೆ ಸಾಹೇಬರು ಬೆಂಗಳೂರಿಗೆ ಕಾರಿನಲ್ಲಿ ಹೊರಟಿದ್ದರು. ನಾನವತ್ತು ರಜೆಯಲ್ಲಿದ್ದೆ. ಹನ್ನೆರಡರ ಹೊತ್ತಿಗೆ ಕರೆ ಮಾಡಿದ ಸಾಹೇಬರು, ಎರಡು ಗಂಟೆಗೆ ಮನೆಗೆ ಬಂದು, ಹೊರಗೇ ಅಡಗಿ ಕೂತಿರಲು ಹೇಳಿದರು. ಮೇಡಂ ಒಬ್ಬರೇ ಮನೆಯಲ್ಲಿದ್ದಾರೆ. ಯಾರೋ ಒಬ್ಬ ಮಧ್ಯಾಹ್ನ ಎರಡೂವರೆಗೆ ಬರ್ತಾನೆ ಅಂತ ಹೇಳಿದರು. ಮೇಡಂ ಫೋನಿನಲ್ಲಿ ಮಾತನಾಡುವಾಗ ಸಾಹೇಬರು ಕದ್ದು ಕೇಳಿಸಿಕೊಂಡರಂತೆ. ತಾನೂ ಸಹ ವಾಪಸು ಬರ್ತೀನಿ ಅಂದ್ರು. ಹಾಗೆಯೇ ನಾನು ಎರಡು ಗಂಟೆಗೆ ಹೋಗಿ, ಮನೆಯ ಹೊರಗೆ ಅಡಗಿ ಕುಳಿತಿದ್ದೆ. ಕೊಂಚ ಹೊತ್ತಿನಲ್ಲಿ ಸಾಬು ಬಂದು,